



ಎನ್ನುವುದೂ ಒಂದು ಕೊಲಾಜ್ ಇದ್ದ ಹಾಗೆಯೇ. ಇದನ್ನೇ ನನ್ನ ಈ ಸರಣಿಯ ಕೃತಿಗಳಲ್ಲಿ ತಂದಿದ್ದೇನೆ.

ಬೆಂಗಳೂರು – ಮೈಸೂರು ರಸ್ತೆಯಲ್ಲಿ ಹಲವು ಕಡೆ ಹೋರ್ಡಿಂಗ್ಸ್ ಇವೆ. ಹಾಕಿದ ಒಂದಿಷ್ಟು ದಿನಗಳಿಗೆ ಅವೆಲ್ಲ ಹಾಳಾಗಿ, ಒಂದೊಂದು ಅಕ್ಷರಗಳು ಕಿತ್ತುಹೋಗಿ ವಿಕ್ಷಿಪ್ತವಾಗಿ ಕಾಣಿಸುತ್ತವೆ. ಅದರ ಹಿಂದೆ ತಗಡು ಜೋಡಿಸುವ ಕಡೆ ಗ್ರಿಡ್ ಲೈನ್‌ಗಳು ಇರುತ್ತವೆ. ನನ್ನ ಕಲಾಕೃತಿಗಳಲ್ಲಿಯೂ ಅಂಥ ಗ್ರಿಡ್‌ಲೈನ್‌ಗಳು ಇವೆ. ಅವು ಒಂದರಿಂದ ಇನ್ನೊಂದನ್ನು ಪ್ರತ್ಯೇಕಿಸುವ ಹಾಗೆ, ಒಂದರಿಂದ ಇನ್ನೊಂದಕ್ಕೆ ಹರಿಯುವ ಹಾಗೆ ಏನನ್ನೋ ಹೇಳುತ್ತವೆ. ಹಾಗೆಯೇ ಅವೊಂದು ರೀತಿಯಲ್ಲಿ ಆರ್ಕಿಯಾಲಾಜಿಕಲ್ ಟೈಮ್ ಇದ್ದಹಾಗೆ. ಕಾಲ ಸರಿದುಹೋದ ಅನುಭವ ಆಗಬೇಕು, ಹಾಗೆ ಸಂಯೋಜನೆ ಮಾಡಿದ್ದೇನೆ.

ಇದರ ಜೊತೆಗೆ ಇನ್ನೊಂದು ಅಂಶವಿದೆ. ಬೆಂಗಳೂರಿನಲ್ಲಿ ಇಂಗ್ಲಿಷ್ ಮತ್ತು ಕನ್ನಡ ಎರಡೂ ಮುಖ್ಯ ಸಂವಹನ ಭಾಷೆಗಳಾಗಿವೆ. ನನ್ನ ಕೃತಿಗಳಲ್ಲಿಯೂ ಕನ್ನಡ – ಇಂಗ್ಲಿಷ್ ಎರಡೂ ಶಬ್ದಗಳೂ ಬರುತ್ತವೆ. ಜಾಬ್, ನೋ ಪಾರ್ಕಿಂಗ್‌ನಂಥ ಶಬ್ದಗಳು ಬಂದರೆ ಅದು ಅಕ್ಷರಗಳಷ್ಟೇ ಅಲ್ಲ, ಸಿಟಿಯ ಬಗ್ಗೆ ಬೇರೆ ಏನೋ ಹೇಳುತ್ತವೆ.

ಇಲ್ಲಿ ಬರುವ ಐಸ್‌ಕ್ರೀಮ್ ಬರೀ ಐಸ್ ಕ್ರೀಮ್ ಅಲ್ಲ, ಮಧ್ಯಮವರ್ಗದ ಆಕಾಂಕ್ಷೆಯೂ ಹೌದು. ಇಲ್ಲಿನ ಮಿಕ್ಸಿ ರಿಪೇರಿ ಅಂಗಡಿ ಅದಷ್ಟೇ ಅಲ್ಲ, ಆತಂಕ–ಉದ್ರಿಕ್ತಗುಣವೂ ಹೌದು. ಹೀಗೆ ಆಕಾಂಕ್ಷೆ, ಆತಂಕ, ಉದ್ರಿಕ್ತತೆ, ಐಡೆಂಟಿಟಿ ಎಲ್ಲವೂ ಇಲ್ಲಿದೆ. ಇವುಗಳೇ ಈ ಕೃತಿಸರಣಿಯ ಚೌಕಟ್ಟು. ಹಾಗಾಗಿಯೇ ಇಲ್ಲಿನ ಇಮೇಜರಿಗಳು ಸಂದಣಿಯಂತೆ ಕಾಣಿಸುತ್ತವೆ. ದಟ್ಟವಾದ ವರ್ಣಗಳಿವೆ. ಒಂದಕ್ಕೊಂದು ಹೊಂದಿಕೊಂಡ ಹಾಗೆ ಇರುವುದಿಲ್ಲ. ನಮ್ಮ ನಗರ ಜೀವನದ ಹಾಗೆ, ಪಕ್ಕದಲ್ಲಿರುತ್ತೇವೆ; ಹೊಂದಿಕೊಂಡಲ್ಲ, ಹೇಗೋ ಏನೋ ಬದುಕಿಕೊಂಡಿದ್ದೇವೆ.

### ಕಲಾಸಂವಾದದ ಉಪನ್ಯಾಸಗಳು

ರವಿಕುಮಾರ್ ಕಾಶಿ ಅವರು ಕಲಾಕೃತಿ ರಚನೆಯ ಜೊತೆಗೆ ಕಲೆಯ ಕುರಿತ ಬೋಧನೆಯಲ್ಲಿಯೂ ನಿರಂತರವಾಗಿ ತೊಡಗಿಕೊಂಡು ಬಂದಿದ್ದಾರೆ. ಕಲೆಯ ಜೊತೆಗೆ ಸಂವಹಿಸುವುದು ಹೇಗೆ, ಅದನ್ನು ಮನಸ್ಸಿನೊಳಗೆ ಬಿಟ್ಟುಕೊಳ್ಳುವ ಕ್ರಮ ಯಾವುದು? ಕಲೆಯನ್ನು ಅರ್ಥಮಾಡಿಕೊಳ್ಳುವುದು ಹೇಗೆ – ಹೀಗೆ ಕಲಾಸಂವಾದದ ಕುರಿತು ಮತ್ತು ಹ್ಯಾಂಡ್‌ಮೇಡ್ ಪೇಪರ್ ತಯಾರಿಕೆ ಕುರಿತು ಅವರು ಮಾಡಿದ ಸರಣಿ ಉಪನ್ಯಾಸಗಳು ಈಗ ಯೂಟ್ಯೂಬ್‌ನಲ್ಲಿ ಲಭ್ಯವಿವೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ನೋಡಬಹುದು.

◆ **ಕಲಾವಿದ ಸಮಕಾಲೀನತೆಗೆ ಸ್ಪಂದಿಸುವುದು ಎಷ್ಟು ಮುಖ್ಯ?**

ಒಬ್ಬ ಕಲಾವಿದ ತನ್ನ ಕಾಲಕ್ಕೆ ಹೇಗೆ ಸಾಕ್ಷಿಯಾಗಬಹುದು ಎಂಬ ಪ್ರಶ್ನೆ ನನಗೆ ತುಂಬ ಮುಖ್ಯ. ನನ್ನ ಕಾಲದ ಅನುಭವವನ್ನು ನಾನು ಹೇಳಲೇಬೇಕು. ಇಲ್ಲಿನ ಒಂದು ಪೇಂಟಿಂಗ್‌ನಲ್ಲಿ ರುದ್ರ ಹನುಮಾನ್ ಚಿತ್ರ ಇದೆ. ಪಕ್ಕದಲ್ಲಿಯೇ ಯಾರೋ ಕೈಮುಗಿಯುತ್ತಿರುವ ಚಿತ್ರ ಇದೆ. ಅದರ ಪಕ್ಕ 'ಪವಿತ್ರ ಗಂಗಾ' ಎಂಬ ಅಕ್ಷರ ಇದೆ. ಇವೆಲ್ಲವೂ ಸೇರಿಯೇ ನಮ್ಮ ಕಾಲದ ಯಾವುದಕ್ಕೋ ಪ್ರತಿಸ್ಪಂದಿಸುತ್ತಿರುತ್ತವೆ. ಕೆಲವು ಸಲ ಸೂಚ್ಯವಾಗಿಯೇ ಹೇಳಬೇಕು, ಕವನದ ಹಾಗೆ. ರೂಪಕಗಳನ್ನು ಕಟ್ಟಿಕೊಡಬೇಕು. ಅದರೊಳಗಡೆ ಬೇರೆ ಬೇರೆ ರೀತಿಯ ಅರ್ಥಗಳು ಹೊರಡಬೇಕು. ನಾನು ಅಂಥ ದಾರಿಗಳನ್ನೇ ಹುಡುಕುತ್ತಿರುತ್ತೇನೆ. ಕೆಲವರು ನೇರವಾಗಿ ಪ್ರತಿಸ್ಪಂದನ ಮಾಡುತ್ತಾರೆ. ನನಗೆ ಯಾವುದೇ ಕೃತಿ ಮೊದಲು ಒಂದು ಕಲಾಕೃತಿಯಾಗಿ ಗೆದ್ದುಕೊಳ್ಳಬೇಕು. ಕವನ ಎಷ್ಟೇ ಪೊಲಿಟಿಕಲ್ ಆಗಿದ್ದರೂ ಅದು ಕವನವಾಗಿಯೂ ಯಶಸ್ವಿಯಾಗಬೇಕು. ಅದಕ್ಕೆ ಸೂಚ್ಯಾರ್ಥ ಮುಖ್ಯ. ಎಲ್ಲವನ್ನೂ ನಾವೇ ಹೇಳದೆ ನೋಡುಗರಿಗೂ ಬಿಟ್ಟುಕೊಡುವುದು ನನಗೆ ಇಷ್ಟ.

◆ **ಈ ವಿಷಮಕಾಲದಲ್ಲಿ ಕಲೆ, ಸಾಹಿತ್ಯಗಳ ಜೊತೆಗಿನ ಒಡನಾಟ ಎಷ್ಟು ಮುಖ್ಯ?**

ಒಂದು ಸಂಗತಿಯನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ಹೇಗೆ ನೋಡಬೇಕು ಎಂಬುದನ್ನು ನಮಗೆ ಕಲೆಯೇ ಕಲಿಸಿಕೊಡುವುದು. ಈ ಬಹುದೃಷ್ಟಿಕೋನ ನಮ್ಮ ಕಾಲಕ್ಕೆ ತುಂಬ ಮುಖ್ಯ. ಯಾಕೆಂದರೆ ಇಂದು ಎಲ್ಲರ ಮೇಲೂ ಒಂದೇ 'ದೃಷ್ಟಿಕೋನ'ವನ್ನು ಹೇರಲಾಗುತ್ತಿದೆ. 'ಜೆಎನ್‌ಯು'ದಲ್ಲಿ ಇದ್ದ ಹಲವು ರಾಮಾಯಣಗಳ ಕುರಿತ ಪಠ್ಯವನ್ನು ತೆಗೆದುಹಾಕಿದ್ದು ಇದರದ್ದೇ ಸೂಚನೆ. ಇದರ ಪ್ರತಿರೋಧಕ್ಕಾಗಿ ನಮಗೆ ಹಲಬಗೆಯ ದೃಷ್ಟಿಕೋನ ಬೇಕು. ಇಂದಿನ ಶಿಕ್ಷಣದಲ್ಲಿಯೂ ಅದು ಸಿಗುತ್ತಿಲ್ಲ. ಇಂದು ಬಹುದೃಷ್ಟಿಕೋನ ಸಿಗುವುದು ಕಲೆ, ಸಾಹಿತ್ಯದಂಥ ಸೃಜನಶೀಲ ಕಲೆಗಳ ಮೂಲಕ ಮಾತ್ರ. ಹಾಗಾಗಿಯೇ ನಮಗೆ, ನಮ್ಮ ಕಾಲಕ್ಕೆ ಕಲೆ ಬೇಕು.

ಪ್ರತಿಕ್ರಿಯಿಸಿ: **feedback@sudha.co.in**

